ಪ್ರ-72 (132)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ ಇವರ ನಿಯಮ 72 ಅಡಿಯಲ್ಲಿ ನೀಡಿರುವ ಸೂಚನಾ ಪತ್ರದ ಸಾರಾಂಶಕ್ಕೆ ಉತ್ತರ.

ವಿಷಯ : ರಾಜ್ಯ ಗೃಹರಕ್ಷಕ ದಳ ಸ್ವಯಂ ಸೇವಾ ಸಿಬ್ಬಂದಿಗಳಿಗೆ ನಿರಂತರ 365 ದಿನಗಳ ಕರ್ತವ್ಯ ನೀಡಿ ತೆಲಂಗಾಣ ರಾಜ್ಯದಲ್ಲಿ ಚಾಲ್ತಿಯಲ್ಲಿರುವಂತೆ ಏಕರೂಪದ ಗೌರವಧನ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಕಲ್ಪಿಸಿ ಹಾಗೂ ಇಎಸ್ಐ ಮತ್ತು ಸರ್ಕಾರಿ ಯೋಜನೆಗಳಾದ ಆರೋಗ್ಯ ಭಾಗ್ಯ/ಕೌಟುಂಬಿಕ ಆರೋಗ್ಯ ವಿಮೆಗಳಂತಹ ಮೂಲಭೂತ ಸೌಲಭ್ಯ ಒದಗಿಸಿ ಸದರಿ ಸಮಸ್ಯೆಗಳ ನಿವಾಹರಣೆಗೆ, ಕೈಗೊಳ್ಳುವ ಕ್ರಮಗಳ ಕುರಿತು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವ ಬಗ್ಗೆ ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

### ಉತ್ತರ:

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 6373/2010 ಮತ್ತು ಅಪೀಲ್ ಸಂಖ್ಯೆ: 2759/2015(Arising out of SLP No.12858/2009) ರಲ್ಲಿ ನೀಡಿರುವ ತೀರ್ಪಿನ ಅನುಸಾರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ; (c)No.133/2016 in Civil Appeal No.2768/2015, ದಿನಾಂಕ:11/9/2016ರ ತೀರ್ಪಿನನ್ವಯ ಗೃಹರಕ್ಷಕರು ತಮ್ಮ ಕರ್ತವ್ಯದ ಅವಧಿಯಲ್ಲಿ ಪೊಲೀಸ್ ಸಿಬ್ಬಂದಿಗಳಂತೆಯೇ ಕರ್ತವ್ಯ ನಿರ್ವಹಿಸುವುದರಿಂದ, **ಪೊಲೀಸ್ ಇಲಾಖೆಯಲ್ಲಿ ನಿಯೋಜಿತರಾದ ಪೊಲೀಸ್ ಪೇದೆಗಳಿಗೆ ಮೀಸಲಾದ ಕರ್ತವ್ಯ ನಿರ್ವಹಿಸುತ್ತಿರುವ ಗೃಹರಕ್ಷಕರಿಗೆ ಮಾತ್ರ ದಿನಾಂಕ:1/4/2020 ರಿಂದ ಜಾರಿಗೆ ಬರುವಂತೆ ಕರ್ತವ್ಯ/ದಿನ ಭತ್ಯೆಯನ್ನು ರೂ.750.00 ಕ್ಕೆ ಹೆಚ್ಚಳ ಮಾಡಿ ದಿನಾಂಕ:7/9/2019ರ ಆದೇಶದಲ್ಲಿ ಆದೇಶಿಸಲಾಗಿರುತ್ತದೆ.**

ರಾಜ್ಯದ ಗೃಹರಕ್ಷಕಕಳದಲ್ಲಿ ಪ್ರಸ್ತುತ 25,326 ಗೃಹರಕ್ಷ ಸದಸ್ಯರು ನೊಂದಣಿಯಾಗಿದ್ದು, ಎಲ್ಲಾ ಗೃಹರಕ್ಷಕರಿಗೆ ವಿವಿಧ ಇಲಾಖಾ ಕರ್ತವ್ಯಗಳಿಗೆ ನಿಯೋಜಿಸುವ ಉದ್ದೇಶದಿಂದ ಸರದಿ ಆಧಾರದ ಮೇಲೆ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ. ತೆಲಂಗಾಣ ರಾಜ್ಯದಲ್ಲಿ ಚಾಲ್ತಿಯಲ್ಲಿರುವಂತೆ ಏಕರೂಪದ ಗೌರವಧನ ಮಂಜೂರಾತಿ ಮಾಡುವ ಪ್ರಸ್ತಾವನೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ದಿನಾಂಕ:7/9/2019ರ ಆದೇಶವನ್ನು ಹೊರಡಿಸಿರುವ ಹಿನ್ನೆಲೆಯಲ್ಲಿ, ಪೊಲೀಸ್ ಇಲಾಖೆಯನ್ನು ಹೊರತುಪಡಿಸಿ ಬೇರೆ ಎಲ್ಲಾ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕ ಗೌರವ ಸದಸ್ಯರಿಗೆ ಕರ್ತವ್ಯ ಭತ್ಯೆ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಲಾಗಿರುತ್ತದೆ.

ಗೃಹರಕ್ಷಕ ಸದಸ್ಯರು ಗೌರವ ಸ್ವಯಂ ಸೇವಕ ಸದಸ್ಯರಾಗಿದ್ದು, ಇಎಸ್ಐ ಮತ್ತು ಸರ್ಕಾರಿ ಯೋಜನೆಗಳಾದ ಆರೋಗ್ಯಭಾಗ್ಯ/ ಕುಟುಂಬ ಆರೋಗ್ಯ, ವಿಮೆಗಳಂತಹ ಮೂಲಭೂತ ಸೌಲಭ್ಯ ಒದಗಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಗೃಹರಕ್ಷಕ ಸದಸ್ಯರು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಅಪಘಾತ ಅಥವಾ ದುರ್ಮರಣ ಹೊಂದಿದಲ್ಲಿ ಮಾತ್ರ ಪರಿಹಾರ ಧನವಾಗಿ ಸರ್ಕಾರದ ಆದೇಶ ಪತ್ರ ಸಂಖ್ಯೆ: ಒಇ 144 ಕಗೃಸೇ 2012, ದಿನಾಂಕ:31-05-2016 ರ ಪ್ರಕಾರ ದಿನಾಂಕ:01-04-2016 ರಿಂದ ಅನ್ವಯವಾಗುವಂತೆ ಪರಿಹಾರ ಧನವನ್ನು ವಿತರಿಸಲಾಗುತ್ತಿದ್ದು, ಗೃಹರಕ್ಷಕರು ಖಾಯಂ ನೌಕರರಲ್ಲದೇ ಸ್ವಯಂ ಸೇವಕ

...2

ಸದಸ್ಯರಾಗಿರುವುದರಿಂದ ಇತರೆ ಸಂದರ್ಭದಲ್ಲಿ ಸದರಿ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲದೇ, ಸಮೂಹ ಅಪಘಾತ ವಿಮೆ ಯೋಜನೆ (Group Personal Accident Policy) ಅನ್ನು ಗೃಹರಕ್ಷಕರುಗಳಿಗೆ ವಿಸ್ತರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ,

ಪ್ರತಿ ಗೃಹರಕ್ಷಕ ಸದಸ್ಯರಿಂದ ವಾರ್ಷಿಕವಾಗಿ ರೂ.50/- ಗಳನ್ನು ಗೃಹರಕ್ಷಕ ನಿಧಿಗೆ ವಂತಿಗೆಯಾಗಿ ಪಡೆಯಲಾಗುತ್ತಿದೆ. ಈ ಗೃಹಕರ್ಷಕ ನಿಧಿಯಿಂದ ವಿದ್ಯಾಭ್ಯಾಸಕ್ಕಾಗಿ ಮತ್ತು ವೈದ್ಯಕೀಯ ಹಾಗೂ ಮರಣ ಹೊಂದಿದಲ್ಲಿ ಪರಿಹಾರ ಧನವನ್ನು ಗೃಹರಕ್ಷಕರಿಗೆ ಹಾಗೂ ಕುಟುಂಬ ವರ್ಗದವರಿಗೆ ಸಹಾಯಧನವನ್ನು ಕೋರಿದಲ್ಲಿ, ಮಂಜೂರು ಮಾಡಲಾಗುತ್ತಿದೆ. ಮುಂದುವರೆದು, ಇಎಸ್‌ಐ ಮತ್ತು ಕೌಟುಂಬಿಕ ಆರೋಗ್ಯ ಭಾಗ್ಯ/ಕೌಟುಂಬಿಕ ಆರೋಗ್ಯ ವಿಮೆಗಳನ್ನು ನೀಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಿ ಗೃಹರಕ್ಷಕರು ಸ್ವಯಂಸೇವಕರಾಗಿರುವುದರಿಂದ, ವಿಮಾ ಹಣವನ್ನು ಪಾವತಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಲಾಗಿದೆ.

**ಸಂಖ್ಯೆ : ಒಇ 23 ಕಗೃಸೇ 2021**

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು